Resignation by Sri Kadari Shamanna as Editor of the Samyukta Karnataka.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸಭಾಪತಿಗಳೇ, ನಾನು ಕೇಳತಕ್ಕದ್ದು ಸಾಮಾನ್ಯ ಒಂದು ವ್ಯಕ್ತಿಗೆ ಸಂಬಂಧಪಟ್ಟದ್ದು ಅಲ್ಲ. ನಮ್ಮ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯ ಇರಬೇಕು ಎಂದು ನಾವೆಲ್ಲಾ ಒಪ್ಪಿಕೊಂಡಿದ್ದೇವೆ, ರಾಜ್ಯಾಂಗ ಬದ್ಧರಾಗಿದ್ದೇವೆ. ಆದರೆ ಕರ್ನಾಟಕದಲ್ಲಿ ಒಂದು ಕನ್ನಡ ದಿನ ಪತ್ರಿಕೆಯ, ಅದರ ಹೆಸರು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಎಡಿಟರ್ ಆಗಿದ್ದ ಶ್ರೀ ಖಾದ್ರಿ ಶಾಮಣ್ಣನವರು ಅವರ ಸ್ಥಾನದಿಂದ ರಾಜೀನಾಮೆ ಕೊಡುವಂತೆ ಒತ್ತಾಯ ಮಾಡಿ ರಾಜೀನಾಮೆ ಕೊಡಿಸಿದ್ದಾರೆ. ಅದರ ಮಾಲೀಕರು ತಮ್ಮ ಸ್ನೇಹಿತರು ಅದಕೆ ತಾವು ಸ್ವಲ್ಪ ಅವರಿಗೆ ಹೇಳಿ ಈ ತರಹ ಸ್ವಲ್ಪ ಮಾಲೀಕರ ವಿರುದ್ಧ, ಅವರಿಗೆ ಗೊತ್ತಿರತಕ್ಕ ವಿಷಯವನ್ನು ಪ್ರಕಟ ಮಾಡಿದ್ದಾರೆಂಬುದಕ್ಕಾಗಿ ತೆಗೆದು ಹಾಕಿರುವುದು ಸರಿಯಲ್ಲ, ಆದುದರಿಂದ ಅವರಿಗೆ ಒಂದು ಮಾತು ಹೇಳಿ ಎಂದು ಹೇಳಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಮಾನ್ಯ ಶ್ರೀ ಖಾದ್ರೀ ಶಾಮಣ್ಣನವರು ರಾಜೀನಾಮೆ ಕೊಟ್ಟಿರುವ ಬಗ್ಗೆ ಇಲ್ಲಿ ಯಾವ ರೀತಿ ಚರ್ಚೆ ನಡೆಸಬೇಕು ಎನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಅದರ ಬಗ್ಗೆ ನಾವು ಇನ್ನೂ ಯಾವ ನೋಟೀಸ್ ಕೊಟ್ಟಿಲ್ಲ, ಒಪ್ಪುತ್ತೇನೆ. ಅದು ಮೊದಲನೆಯದು. ಮಾನ್ಯ ಶ್ರೀ ಖಾದ್ರೀ ಶಾಮಣ್ಣನವರು ಯಾವ ತರಹ ನಿರ್ಭಯರಾದ ಪತ್ರಿಕಾ ಕರ್ತರಾಗಿದ್ದರು, ತತ್ವನಿಷ್ಠರಾಗಿದ್ದರು ಎಂಬುದು ತಮಗೆಲ್ಲಾ ಗೊತ್ತಿದೆ.

SRI D. DEVARAJ URS.—You may say your opinion. Then how do you raise this ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇಲ್ಲಿ ಹೇಳತಕ್ಕಂಥಾದ್ದು ಏನು ಟ್ರಸ್ಟ್ ಇರುತ್ತದೆ. ಇದು ಸಾರ್ವಜನಿಕರು ದುಡ್ಡನ್ನು ಕೊಟ್ಟಿರತಕ್ಕಂತ ಟ್ರಸ್ಟ್ ಆಗಿರುತ್ತದೆ. ಸುಮಾರು ೪ ಲಕ್ಷ ರೂಪಾಯಿಗಳಷ್ಟು ಹಣ ಸಾರ್ವಜನಿಕರದ್ದು ಇರುತ್ತದೆ. ಉತ್ತರ ಕರ್ನಾಟಕ ಜನ ತಮ್ಮ ರಕ್ತದಿಂದ ಕಟ್ಟಿರ ತಕ್ಕಂಥ ಒಂದು ಸಂಸ್ಥೆಯಾಗಿರುತ್ತದೆ.

ಶ್ರೀ ಬಿ. ಬಾಸ್ಕರಶೆಟ್ಟಿ.—ಇದು ಖಾಸಗಿ ಸಂಸ್ಥೆಯವರು ನಡೆಸತಕ್ಕಂಥ ಸಂಸ್ಥೆಯಾಗಿರುತ್ತದೆ. ನಾನು ಒಬ್ಬ ಶಾಸಕನಾಗಿ ಎಷ್ಟೋ ವರ್ಷಗಳಿಂದ ನೋಡುತ್ತಿದ್ದೇನೆ. ಇದು ಒಂದು ಖಾಸಗಿ ಸಂಸ್ಥೆಯ ವ್ಯವಹಾರವಾಗಿರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಖಾಸಗಿ ಸಂಸ್ಥೆಯಲ್ಲ. ಇದು ಖಾಸಗಿ ವ್ಯವಹಾರ ವಾಗಿದ್ದರೆ ಇದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಾ ಇರಲಿಲ್ಲ ?

ಶ್ರೀ ಬಾಸ್ಕರಶೆಟ್ಟಿ.—ಇದಕ್ಕೆ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಬಹಳ ಅನ್ಯಾಯವಾಗಿದೆ ಅದನ್ನು ತಪ್ಪಿಸಬೇಕೆಂದು ಹೇಳುತ್ತಾ ಇದ್ದೇನೆ.

(ಅನೇಕ ಜನ ಸದಸ್ಯರು ಎದ್ದು ನಿಂತು ಗೊಂದಲವನ್ನೆಬ್ಬಿಸಿದರು)

MR. SPEAKER.—I am not following what is going on here. ತಾವು ಮತ್ತು ಜೆ. ಎಚ್. ಪಟೇಲ್‌ರವರು ಮುಖ್ಯ ಮಂತ್ರಿಯವರಲ್ಲಿಗೆ ಹೋಗಿ ಚರ್ಚೆಮಾಡಿ. you discuss the matter with the Chief Minister.

ಶ್ರೀ ಜೆ. ಎಚ್. ಪಟೇಲ್.—ಇದು ಒಬ್ಬ ವ್ಯಕ್ತಿಯನ್ನು ಉಳಿಸುವ ಪ್ರಶ್ನೆಯಾಗಿರುತ್ತದೆ, ತಮ್ಮ ವಿರುದ್ಧ ಬರೆದಿದ್ದಾರೆಂದು ತಕ್ಷಣ ಅವರನ್ನು ಕಿತ್ತುಹಾಕುವ ಪ್ರವೃತ್ತಿಯನ್ನು ಬಿಡಬೇಕೆಂದು ಹೇಳುತ್ತೇನೆ.

ಒಬ್ಬ ಸದಸ್ಯರು —ಈ ರೀತಿಯಾಗಿ ವ್ಯವಹಾರ ನಡೆಯುತ್ತಿದ್ದರೆ ಪತ್ರಿಕಾ ಸ್ವಾತಂತ್ರ್ಯ ಎಲ್ಲಿ ಉಳಿಯತ್ತದೆಂದು ಕೇಳುತ್ತಿದ್ದೇನೆ ಸ್ವಾಮಿ.

ಶ್ರೀ ಕೆ. ಯೆಂಕಟಪ್ಪ,—ಸ್ವಾಮಿ ವಿರೋಧ ಪಕ್ಷದವರು ಗದ್ದಲ ಮಾಡುತ್ತಿರುವುದನ್ನು ನೋಡಿದರೆ ನಾವು ಅಸೆಂಬ್ಲಿಯಲ್ಲಿ ಮಾತನಾಡಬಾರದು ಎಂದು ಕಾಣುತ್ತದೆ.

SRI P. RAMDEV.—I take strong objections, Sir, to the use of the word "GADDALA"

ಅಧ್ಯಕ್ಷರು.—ಅನಾವಶ್ಯಕವಾಗಿ ರಿಮಾರ್ಕ್ಸ್ ಮಾಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಿಗೆ ಗಂಟೆಗಟ್ಟಲೇ ಮಾತನಾಡಲು ಅವಕಾಶಕೊಡಿ ಬೇಡವೆಂದು ಹೇಳುವುದಿಲ್ಲ. ಅವರು ಗಂಟೆ ಗಟ್ಟಲೆ ಮಾತನಾಡಲಿ ಆದರೆ ವಿರೋಧ ಪಕ್ಷದವರು ಗದ್ದಲ ಮಾಡುತ್ತಿದ್ದಾರೆ ಎಂದು ಹೇಳುವ ಮಾತು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ರೂಲ್ ನಂ ೩೧೨ರ ಪ್ರಕಾರ ನಾನು ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

MR. SPEAKER.—Under what rule and regarding what subject-matter are you speaking ?

ಶ್ರೀ ಯೆಂಕಟಪ್ಪ.—ಮೆ ೨೦ನೇ ತಾರೀಖಿನ ತಾಲ್ಲೂಕ್ ಬೋರ್ಡ್ ಎಲೆಕ್ಷನ್ ಇದೆ. ಅದರ ಬಗ್ಗೆ ಮಾತನಾಡಬೇಕೆಂದಿದ್ದೇನೆ.

ಅಧ್ಯಕ್ಷರು.—ಅದನ್ನು ಬೆಳಿಗ್ಗೆ ನೋಡುತ್ತೇನೆ. ದಯವಿಟ್ಟು ತಾವು ಈಗ ಕುಳಿತುಕೊಳ್ಳಿ.

Notice of an adjournment motion.

re : Demolition of a harijan house in Yelahanka near Bangalore.

ಶ್ರೀ ವೈ. ರಾಮಕೃಷ್ಣ. —ಸ್ವಾಮಿ ನಾನು ಈಗ ಒಂದು ನಿಲುವಳಿ ಸೂಚನೆ ಮೋಷನ್ ಕಳುಹಿಸಿಕೊಟ್ಟಿದ್ದೇನೆ, ಅದು ಈ ರೀತಿ ಇರುತ್ತದೆ. "We the undersigned members give notice under Rule 50 of the Rules of Procedure and Conduct of Business of the Karnataka Legislature Assembly that this House stands adjourned to discuss the following matter of urgent public importance.....

ಅಧ್ಯಕ್ಷರು.—ನಿಲುವಳಿ ಸೂಚನೆ ಮಂಡನೆ ಮಾಡಲು ನಾನು ಅವಕಾಶ ಕೊಟ್ಟಿಲ್ಲ.

ಶ್ರೀ ವೈ. ರಾಮಕೃಷ್ಣ.—ಅದಕ್ಕೆ ಅವಕಾಶ ಕೊಡಿ ಎಂದು ಕೇಳುವುದಕ್ಕಾಗಿಯೇ ನಾನು ನಿಂತಿದ್ದೇನೆ ಸ್ವಾಮಿ. ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅದರ ಹಿನ್ನೆಲೆಯನ್ನು ಹೇಳಿ ಓದಬೇಡಿ.

ಶ್ರೀ ವೈ. ರಾಮಕೃಷ್ಣ.—ಇಲ್ಲಿ ನಾನು ತೀವ್ರವಾದ ಆಪಾದನೆಯನ್ನು ವ್ಯಕ್ತಪಡಿಸುವುದೇನೆಂದರೆ ಮಂತ್ರಿಮಂಡಲದಲ್ಲಿ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ಮಾಡುತ್ತಿದ್ದೇನೆ. ಅದು ಅವರು ಮಂತ್ರಿಗಳಾಗಿ ಅವರು ಮಾಡಿರುವ ಕೆಲಸ ಹಾಗೂ ವೈಯುಕ್ತಿಕವಾಗಿ ಅವರ ವಿರುದ್ಧ ನಿಂತುಕೊಂಡಿದ್ದ ಮಾರಪ್ಪ ಎಂಬ ಹರಿಜನ ಒಬ್ಬನ ಮೇಲೆ ಸೇಡು ತೀರಿಸಿಕೊಳ್ಳುತಕ್ಕಂಥ ಕೃಮವೆಂದು ನಾನು ಈ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಈಗ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ನಿಲುವಳಿ ಸೂಚನೆ ಚರ್ಚೆಗೆ ಬಂದಾಗ ತಾವು ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳನ್ನು ಬರಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಗೌವರ್ನರ್ ಅಡ್ರಸ್ ಮೇಲೆ ಮಾತನಾಡತಕ್ಕಂಥ ಸಂದರ್ಭವಿರುತ್ತದೆ, ಚರ್ಚೆ ಮಾಡತಕ್ಕಂಥ ಸಂದರ್ಭ ಬರುತ್ತದೆ ಆಗಾಗ ತಾವು ಮಾತನಾಡಬಹುದು.